ದಿನಾಂಕ 05.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ- ಎದುರುದಾರರ ಪರ ವಕೀಲರಿಂದಃ-</u>

ಅಪಘಾತ ಸಂದರ್ಭದಲ್ಲಿ ನಾನು ಮಾರುತಿ ಕಾರನ್ನು ಚಲಾಯಿಸುತ್ತಿದ್ದೆನು. ನಾನು ಗೋಣಿಕೊಪ್ಪದಿಂದ ವಿರಾಜಪೇಟೆ ಕಡೆಗೆ ಹೋಗುತ್ತಿದ್ದೇನು. 1 ನೇ ಎದುರುದಾರರು ನನ್ನ ವಿರುದ್ಧ ದಿಕ್ಕಿನಲ್ಲಿ ಬರುತ್ತಿದ್ದರು. ಘಟನಾ ಸ್ಥಳದಲ್ಲಿ ರಸ್ತೆ ವಿಶಾಲವಾಗಿ ಇತ್ತು. ಅಪಘಾತವು ರಾತ್ರಿ 8.30 ಗಂಟೆಗೆ ಆಗಿರುತ್ತದೆ. ನನ್ನ ಎದುರಿಗೆ ಬರುತ್ತಿದ್ದ 1 ನೇ ಎದುರುದಾರರ ವಾಹನವು ನನಗೆ ಕಾಣಿಸದೇ ಇದ್ದುದ್ದರಿಂದ ನಾನು ವೇಗವಾಗಿ ನನ್ನ ಕಾರನ್ನು ಚಲಾಯಿಸಿಕೊಂಡು ಹೋಗಿ ಎದುರುದಾರರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ನನ್ನ ಸ್ನೇಹಿತರು ನೀಡಿರುತ್ತಾರೆ. ನನ್ನ ನಿರ್ಲಕ್ಷ್ಯತನದಿಂದ ಅಪಘಾತವಾಗಿದ್ದರೂ ಸಹ ಸುಳ್ಳು ದೂರನ್ನು 1 ನೇ ಎದುರುದಾರರ ವಿರುದ್ಧ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಅಪೋಲೋ ಆಸ್ಪತ್ರೆಯನ್ನು ಹೊರತುಪಡಿಸಿ ಬೇರೆ ಕಡೆ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ನನಗೆ ಆಸ್ಪತ್ರೆಯಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ಹಣ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಹೆಚ್ಚಿನ ಮೊತ್ತದ ಬಿಲ್ಲುಗಳನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ಬಿಲ್ಲಿನಲ್ಲಿ ಉಳಿದ ಎಲ್ಲಾ ಬಿಲ್ಲುಗಳನ್ನು ಸೇರ್ಪಡೆ ಮಾಡಲಾಗಿದೆ ಎಂದರೆ ಸರಿ. ನಾನು ಅಪೋಲೋ ಆಸ್ಪತ್ರೆಯನ್ನು ಹೊರತುಪಡಿಸಿ ಹಾಜರುಪಡಿಸಿರುವ ಇತರೆ ಬಿಲ್ಲುಗಳು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸಂದರ್ಭದಲ್ಲಿ ನನಗೆ ಮಧುಮೇಹ ಖಾಯಿಲೆ ಇತ್ತು. ನಾನು ಅಪೋಲೋ ಆಸ್ಪತ್ರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಮಧುಮೇಹಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ಈಗಲೂ ಸಹ ನಾನು ಮೊದಲಿನ ರೀತಿಯಲ್ಲಿಯೇ ಕೃಷಿಯಲ್ಲಿ ಆದಾಯ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ನನ್ನ ಕೃಷಿ ಆದಾಯ ಕಡಿಮೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಅರ್ಜಿಯಲ್ಲಿ ಕೋರಿರುವಷ್ಟು ಪರಿಹಾರವನ್ನು ನೀಡಲು 3 ನೇ ಎದುರುದಾರರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**1** ಮತ್ತು **2** ನೇ ಪರ ವಕೀಲರು ಗೈರು ಹಾಜರಾಗಿದ್ದು**,** ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.